**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಸಿ.ಸಿ.ನಂ.448/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | ಉಮೇಶ ಸುರಣಗಿ | ಸಿಡಬ್ಲ್ಯೂ | 7 |
| ತಂದೆಯ ಹೆಸರು | ನಿಂಗಪ್ಪ | ಪಿಡಬ್ಲ್ಯೂ | 3 |
| ವಯಸ್ಸು | 50 ವರ್ಷ | | |
| ಉದ್ಯೋಗ | ಆಹಾರ ಶಿರಸ್ತೇದಾರರು, ರಾಣೇಬೆನ್ನೂರ | | |
| ವಾಸಸ್ಥಳ | ರಾಣೇಬೆನ್ನೂರ | | |

**ದಿಃ11.02.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.**

1) ನಾನು ಹಾವೇರಿಯ ತಹಶೀಲ್ದಾರ ಕಛೇರಿಯಲ್ಲಿ ಆಹಾರ ಶಿರಸ್ತೇದಾರರಾಗಿ ಕೆಲಸ ಮಾಡುವಾಗ ಚಾ.ಸಾ-8 ತಹಶೀಲ್ದಾರ ಆಗಿ ಕೆಲಸ ಮಾಡುತ್ತಿದ್ದು, ಚಾ.ಸಾ-1 ಇವರು ಪ್ರಭಾರ ಆಹಾರ ನಿರೀಕ್ಷಕರಾಗಿ ಕೆಲಸ ಮಾಡುತ್ತಿದ್ದರು. 2016 ನೇ ಸಾಲಿನಲ್ಲಿ ಸರ್ಕಾರದಿಂದ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಫಲಾನುಭವಿಗಳಿಗೆ ಆಹಾರ ಸಾಮಗ್ರಿಗಳನ್ನು ವಿತರಣೆ ಮಾಡಲು ಕೋಪನ ವ್ಯವಸ್ಥೆಯನ್ನು ಮಾಡಿದ್ದು, ಸದರಿ ಕೋಪನ್‌ಗಳನ್ನು ಆನಲೈನ ಮೂಲಕ ನಿಗದಿಪಡಿಸಿದ ಸೇವಾಕೇಂದ್ರದಿಂದ ಪಡೆದುಕೊಂಡು ಸಂಬಂದಪಟ್ಟ ನ್ಯಾಯಬೆಲೆ ಅಂಗಡಿಗಳಿಗೆ ಹಾಜರುಪಡಿಸಿದಲ್ಲಿ ಅಂಗಡಿಯವರು ಆಹಾರ ಧಾನ್ಯಗಳನ್ನು ವಿತರಣೆ ಮಾಡುತ್ತಿದ್ದರು.

2) 1 ನೇ ಆರೋಪಿಯು ಆಹಾರ ಪಡಿತರ ವಿತರಣೆ ಮಾಡಲು ಪರವಾನಿಗೆದಾರನಾಗಿದ್ದು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಒಂದೇ ಆಧಾರ ಸಂಖ್ಯೆಗೆ 72 ಕೂಪನಗಳನ್ನು ಮತ್ತು 1 ಆಧಾರಕಾರ್ಡಗಳಿಗೆ ಬೇರೆ 72 ಕೂಪನಗಳನ್ನು ಬೇರೆ ಆಧಾರಕಾರ್ಡ ನಂಬರಗಳನ್ನು ಜೋಡಿಸಿ ಒಟ್ಟು 72

ಕೂಪನಗಳನ್ನು ಆರೋಪಿಗಳು ಸೃಷ್ಟಿಸಿ ರೂ.1,10,808/- ಗಳ ಆಹಾರ ಸಾಮಗ್ರಿಗಳನ್ನು ದುರುಪಯೋಗಪಡಿಸಿಕೊಂಡಿರುವ ಬಗ್ಗೆ ದಿನಾಂಕಃ 22.10.2016 ರಂದು ಸರ್ಕಾರದ ಎನ್.ಐ.ಸಿ ಯಿಂದ ಆರೋಪಿಗಳು ಒಂದೇ ಆಧಾರಕಾರ್ಡಿನ ಮೇಲೆ ಸದರಿ ನಂಬರಿನ ಆಧಾರಕಾರ್ಡಿನ ಮೇಲೆ ಬೇರೆ ಬೇರೆ ವ್ಯಕ್ತಿಗಳ ಆಹಾರದ ಕೂಪನ್‌ಗಳನ್ನು ವಿತರಣೆ ಮಾಡಿ ಮೇಲೆ ಹೇಳಿದ ರೂ.1,10,808/- ಗಳನ್ನು ದುರುಪಯೋಗಪಡಿಸಿಕೊಂಡಿರುವ ಮಾಹಿತಿಯನ್ನು ಆಧರಿಸಿ ನಂತರ ಹಾವೇರಿ ಜಿಲ್ಲಾಧಿಕಾರಿಯವರು ಹಾವೇರಿಯ ತಹಶೀಲ್ದಾರ ಇವರಿಗೆ ನಿರ್ದೇಶನ ನೀಡಿ 1 ನೇ ಆರೋಪಿಗೆ ಕೊಟ್ಟಂತಹ ಪರವಾನಿಗೆಯನ್ನು ರದ್ದುಗೊಳಿಸಲು ಜಿಲ್ಲಾಧಿಕಾರಿಯವರು ಚಾ.ಸಾ-6 ಇವರಿಗೆ ಆರೋಪಿಗಳ ವಿರುದ್ಧ ಪ್ರಕರಣವನ್ನು ದಾಖಲಿಸಲು ಹಾವೇರಿ ತಹಶೀಲ್ದಾರ ಇವರು ಕೊಟ್ಟಂತಹ ನಿರ್ದೇಶನದ ಪ್ರಕಾರ ಚಾ.ಸಾ-6 ಇವರು ಚಾ.ಸಾ-1 ಇವರಿಗೆ ನಿರ್ದೇಶನ ಕೊಟ್ಟ ಪ್ರಕಾರ ಚಾ.ಸಾ-1 ಇವರು ಪ್ರಕರಣ ದಾಖಲಿಸಿರುತ್ತಾರೆ. ಆದೇಶ ಮಾಡಿ ನಂತರ ಹಾವೇರಿಯ ತಹಶೀಲ್ದಾರ ಇವರಿಗೆ ಮಾಹಿತಿಯನ್ನು ಕೊಟ್ಟಿದ್ದಾರೆ, ಅಲ್ಲದೇ ಕಾರ್ಡುದಾರರಿಗೆ ಆಹಾರ ಸಾಮಗ್ರಿಗಳನ್ನು ವಿತರಿಸಲು ಬೇರೆ ಅಂಗಡಿಗಳಿಗೆ ಬದಲಿ ವ್ಯವಸ್ಥೆ ಮಾಡಿರುತ್ತಾರೆ. ನನಗೆ ನ್ಯಾಯ ಬೆಲೆಗ ಅಂಗಡಿಯ ಮಾಲೀಕರನ್ನು ನೋಡಿದರೆ ಗುರುತಿಸಲಾಗುತ್ತದೆ. ಅದೇ ರೀತಿ ಸೇವಾಕೇಂದ್ರದ ಮಾಲೀಕರನ್ನು ನೋಡಿದರೆ ಗುರುತು ಹಿಡಿಯಲು ಆಗುತ್ತದೆ.

**<u>ಪಾಟೀ ಸವಾಲುಃ ಶ್ರೀ.ಸಿ.ಹೆಚ್.ಜಿ ವಕೀಲರಿಂದಃ 2 ನೇ ಆರೋಪಿ ಪರವಾಗಿಃ</u>**

3) ಹಾವೇರಿಯ ಜಿಲ್ಲಾಧಿಕಾರಿಗಳು ತಹಶೀಲ್ದಾರ ಇವರಿಗೆ ಚಾ.ಸಾ-1 ಇವರಿಗೆ ಆರೋಪಿಗಳು ವಿರುದ್ಧ ಪ್ರಕರಣವನ್ನು ದಾಖಲಿಸಲು ದಿನಾಂಕಃ 02.11.2016 ರಂದು ಜಿಲ್ಲಾಧಿಕಾರಿಯವರು ತಹಶೀಲ್ದಾರ ಇವರಿಗೆ ಆದೇಶ

ಮಾಡಿರುತ್ತಾರೆ. ತಹಶೀಲ್ದಾರ ಇವರು ಚಾ.ಸಾ-1 ಇವರಿಗೆ ದಿನಾಂಕಃ 04.11.2016 ರಂದು ನಿರ್ದೇಶನವನ್ನು ಕೊಟ್ಟಿರುತ್ತಾರೆ. ಹಾವೇರಿಯ ಜಿಲ್ಲಾಧಿಕಾರಿಯವರು ತಹಶೀಲ್ದಾರ ಇವರಿಗೆ ನಿರ್ದೇಶವನ್ನು ನೀಡಿ ನಂತರ ತಹಶೀಲ್ದಾರ ಇವರು ಚಾ.ಸಾ-1 ಇವರಿಗೆ ಆರೋಪಿಗಳ ವಿರುದ್ದ ಪ್ರಕರಣ ದಾಖಲಿಸಲು ನಿರ್ದೇಶನ ಕೊಟ್ಟಿದ್ದರು ಎಂದು ಸುಳುಳ ಸಾಕ್ಷಿ ಹೇಳುತಿತದ್ದೇನೆ ಅಂದರೆ ಸರಿಯಲ್ಲ. ಅದೇ ರೀತಿ ನಾನು ಜಿಲ್ಲಾಧಿಕಾರಿಗಳು ಮಾಡಿದಂತಹ ಆದೇಶವನ್ನು ಮತ್ತು ಹಾವೇರಿಯ ತಹಶೀಲ್ದಾರ ಇವರು ಮಾಡಿದಂತಹ ಆದೇಶವನ್ನು ನೋಡಿರುವದಿಲ್ಲ. ಆರೋಪಿಗಳು ಈ ಪ್ರಕರಣದಲ್ಲಿ ಹೇಳಿದಂತಹ ಯಾವುದೇ ಅಪರಾಧಗಳನ್ನು ಮಾಡದೇ ಇದ್ದರೂ ಸಹ ನಾನು ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಈ ಪರಕರಣದಲ್ಲಿ ಹೇಳಿದಂತಹ ಎಲ್ಲ ಸಂಗತಿಗಳು ತಾಂತ್ರಿಕ ದೋಷಗಳಿಂದ ಆಗಿದ್ದರೂ ಸಹ ನಾನು ಆರೋಪಿಗಳ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತಿತದ್ದೇನೆ ಅಂದರೆ ಸರಿಯಲ್ಲ. ಆ ರೀತಿ ತಾಂತ್ರಿಕ ದೋಷಗಳ ವಿರುದ್ದ ಇದ್ದುದರಿಂದ ನಮ್ಮ ಮೇಲೆ ಮೇಲಾಧಿಕಾರಿಗಳು ಕ್ರಮ ಜರುಗಿಸಬಹುದು ಎಂದು ಆರೋಪಿಗಳ ವಿರುದ್ದ ಚಾ.ಸಾ-1 ಇವರು ಪ್ರಕರಣವನ್ನು ದಾಖಲಿಸಿರುತ್ತಾರೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.